# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ಕಾವ ಪರೀಕ್ಷೆ – ೨೦೧೪

**ಪ್ರಶ್ನೆಪತ್ರಿಕೆ – ೧**

## ಕನ್ನಡ ಗದ್ಯ – ಪದ್ಯ – ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** — **ಗರಿಷ್ಠ ಅಂಕಗಳು : ೯೦**

### ಕಾವ್ಯ ಭಾಗ

**I. ಕೆಳಗಿನ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ.** ೫

(೧) ಹೆಂಡತಿಯೊಂದಿಗೆ ಬಡತನ, ದೊರೆತನ
ಏನೂ ಭಯವಿಲ್ಲ
ಹೆಂಡತಿಯೊಲುಮೆಯ ಭಾಗ್ಯವನರಿಯದ
ಗಂಡಿಗೆ ಜಯವಿಲ್ಲ

(೨) ಅಗಲೆಲ್ಲ ಬೆವರ್ ಅರ್ಸಿ
ತಂದದ್ರಲ್ ಒಸಿ ಮುರ್ಸಿ
ಸಂಜೇಲಿ ವುಳಿ ಯೆಂಡ ಕೊಂಚ
ಯೀರ್ತ ಮೈ ಝುಂ ಅಂದ್ರೆ
ವಾಸ್ನೆ ಘಂ ಘಂ ಅಂದ್ರೆ
ತುಂಬೋಯ್ತು ರತ್ನನ್ ಪರ್ಪಂಚ!

**II. ಕೆಳಗಿನ ಮೂರಕ್ಕೆ ಸಂದರ್ಭ ಸ್ವಾರಸ್ಯ ಬರೆಯಿರಿ.** ೯

೧. ಆ ಕಡೆ ಉದ್ಯಾನ ಈ ಕಡೆ ಸ್ಮಶಾನ!
೨. ಇವನ ಧಮನಿಗಳಲ್ಲಿ ಸುರಿವ ನೆತ್ತರ ವೇಗ ಈ ನೆಲದ್ದೇ ಅಲ್ಲ
೩. ನಡುವೆ ಅದೂ ಇದೂ ಇಪ್ಪತ್ತೆಂಟನಾಡುವುದು
೪. ನಾಗಪ್ಪ ಬಂದವನೆ ಕೆಂಪಯ್ಯ ಏಳೊ
೫. ಗಗನದೆತ್ತರದಲ್ಲಿ ಗರುಡ ವಾಯುವಿಹಾರಿ

**III. ಮೂರಕ್ಕೆ ಟಿಪ್ಪಣಿ ಬರೆಯಿರಿ.** ೬

೧. ಕುವೆಂಪು   ೨. ಸಿದ್ದಲಿಂಗಯ್ಯ   ೩. ಮಲೆದೇವ್ರು
೪. ಗಗನವೇಧಿ   ೫. ಸಮುದ್ರಮಥನ

**IV. ಕೆಳಗಿನ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೧೦

೧) ಸಂಜೆ ಗಾಂಧಿಬಜಾರಿನಲ್ಲಿ ಮಾಸ್ತಿಯವರನ್ನು ಕಂಡು ಕವಿಗೆ 'ಅಯ್ಯೋ' ಎನ್ನಿಸುವುದೇಕೆ?

(ಪು.ತಿ.ನೋ.)

ಕಾ / ೧

೨) ರಾಜ್ಯವಾಳುವ ಯೋಗ ಬರುವ ಮುನ್ನ ಕೆಂಪೇಗೌಡನ ಸ್ಥಿತಿ ಹೇಗಿತ್ತು?
೩) ನಿವೃತ್ತಿಯ ಬಗೆಗೆ ಸ್ನೇಹಿತರ, ಸಂಬಂಧಗಳ ಉವಾಚ ಏನು?

**V. ಒಂದು ಪ್ರಶ್ನೆಗೆ ಉತ್ತರಿಸಿ.** ೧೦

೧. 'ಬಡವನೆ ಕಲಿಯುಗದಂತ್ಯದ ಕಲ್ಕಿ'ಯಾಗುತ್ತಾನೆಂದು ಕವಿ ಅಭಿಪ್ರಾಯಪಡಲು ಕಾರಣಗಳೇನು? ವಿಶದಪಡಿಸಿ.

೨. ಕವಿತೆ ಬರೆಯುವುದು ಒಂದು 'ಅನ್ವೇಷಣೆ'ಯಾಗುವುದು ಹೇಗೆ? ಸ್ಪಷ್ಟಪಡಿಸಿ.

### ಗದ್ಯ ಭಾಗ

**I. ಕೆಳಗಿನ ಐದು ಪದಗಳಿಗೆ ಸ್ವಂತವಾಕ್ಯ ರಚಿಸಿ.** ೫

೧. ಮೃಷ್ಟಾನ್ನ   ೨. ಜಲಪಾತ   ೩. ಸಂಸಾರ   ೪. ಹೊಸ ಚಿಗುರು
೫. ಏಳುಬೀಳು   ೬. ಸಿಪಾಯಿ   ೭. ಅರಮನೆ

**II. ಚೆಲ್ಲಾಪಿಲ್ಲಿಯಾಗಿರುವ ಪದಗಳನ್ನು ಅರ್ಥಪೂರ್ಣವಾಗಿ ರೂಪಿಸಿ.** ೫

೧. ಮರಿ ಬಚ್ಚಲು ಎಂದರೆ ಬಡಬಾಗ್ನಿಯ ಮನೆಯ ಬೆಂಕಿ
೨. ಅರ್ಥಮಾಡಿಕೊಳ್ಳುವುದು ಬಹಳ ಪ್ರಕೃತಿಯನ್ನು ಕಷ್ಟ
೩. ಹೆಂಡತಿಯ ಇಲ್ಲವಾಗಿದೆ ಕನ್ನಡಿಗರಿಗೆ ಇದ್ದೂ ಹೆಸರು
೪. ನಾಯಿ ಹತ್ತಿರ ಬೈರನ ಕಂತ್ರಿ ಇತ್ತು ಒಂದು
೫. ಬೇಕೇ ಬುಲ್‌ಡೋಜರ್ ನಿರ್ಮಿಸಲು ಬೇಕು ಅಣೆಕಟ್ಟು

**III. ಎರಡಕ್ಕೆ ಟಿಪ್ಪಣಿ ಬರೆಯಿರಿ.** ೧೦

೧. ವಿಶ್ವಾಮಿತ್ರ ಸೃಷ್ಟಿ   ೨. ಕಿವಿ(ನಾಯಿ)   ೩. ಮೌಖಿಕ ಪರಂಪರೆ

**IV. ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೧೦

೧. 'ಅಜ್ಜಯ್ಯನ ಅಭ್ಯಂಜನ'ದ ಶಾಂತಿ ಪ್ರಪಂಚದ ಕ್ರಾಂತಿಕಾಲಗಳು ಯಾವುವು?
೨. ಕನ್ನಡಿಗರಿಗೆ ಹೆಂಡತಿಯ ಹೆಸರು ಇದ್ದೂ ಇಲ್ಲವಾಗಿರುವುದೇಕೆ?
೩. 'ಧರ್ಮ' ಎಂದರೇನು?

**V. ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೨೦

೧. ಗೊರೂರರ ಎಮ್ಮೆಗೆ ಮಾತು ತಿಳಿಯುತ್ತಿತ್ತೆಂದು ನೀವು ಒಪ್ಪುವಿರಾ? ಉದಾಹರಣೆಗಳೊಂದಿಗೆ ವಿಶದಪಡಿಸಿ.

೨. ಬೈರನ ಕಾಡುಹಂದಿ ಬೇಟೆ ಪ್ರಸಂಗವನ್ನು ವಿವರಿಸಿ.

೩. ಪರಿಸರ ಹಾಳುಮಾಡುವವರಿಗೆ ಕಲಿಸಬೇಕಾದ ಶಿಕ್ಷಣಕ್ಕಾಗಿ ಎಂಥ ಸಂಗತಿಗಳನ್ನು ಚಿತ್ರೀಕರಿಸಬೇಕಾಗುತ್ತದೆ? ನಿದರ್ಶನಗಳೊಂದಿಗೆ ಚರ್ಚಿಸಿ.

***

Created by demo-version of Universal Document Converter. Full version doesn't add this stamp. WWW.PRINT-DRIVER.COM

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ಕಾವ ಪರೀಕ್ಷೆ – ೨೦೧೪

**ಪ್ರಶ್ನೆಪತ್ರಿಕೆ – ೨**

## ವ್ಯಾವಹಾರಿಕ ಕನ್ನಡ ಮತ್ತು ಸಂವಹನ ಕನ್ನಡ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೯೦**

### ಭಾಗ – ೧ – ವ್ಯಾವಹಾರಿಕ ಕನ್ನಡ

**ಅ. ಮೂರು ಪ್ರಶ್ನೆಗಳಿಗೆ ಉತ್ತರಿಸಿ.** ೩೦

೧. ಔಪಚಾರಿಕ ಮತ್ತು ಅನೌಪಚಾರಿಕ ಅಭಿವ್ಯಕ್ತಿಯ ಸ್ವರೂಪವನ್ನು ವಿವರಿಸಿ.

೨. ವಿಚಾರಣ ಪತ್ರ ಎಂದರೇನು? ಒಂದು ಮಾದರಿ ವಿಚಾರಣಾ ಪತ್ರವನ್ನು ಸಿದ್ಧಗೊಳಿಸಿ.

೩. ಅಭ್ಯರ್ಥನ ಪತ್ರದ ಸ್ವರೂಪ ಮತ್ತು ಮಾದರಿಯನ್ನು ಬರೆಯಿರಿ.

೪. ವೃತ್ತ ಪತ್ರಿಕೆಗಳಲ್ಲಿ ಪತ್ರಗಳ ಸ್ವರೂಪವನ್ನು ಕುರಿತು ಬರೆಯಿರಿ.

೫. ಸಮಿತಿ ವರದಿ ಎಂದರೇನು? ಒಂದು ಉದಾಹರಣೆಯನ್ನು ಕೊಡಿ.

**ಆ. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ:** ೨೦

೧. ಶಿರೋನಾಮೆ  ೨. ಆದೇಶ ಪತ್ರ  ೩. ಕಚೇರಿ ಆದೇಶ
೪. ಅಧಿಸೂಚನೆ  ೫. ಸುತ್ತೋಲೆ  ೬. ಆಹ್ವಾನಪತ್ರಿಕೆ

### ಭಾಗ – ೨ – ಸಂವಹನ ಕನ್ನಡ

**ಅ. ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೨೦

೧) ಸಂವಹನ ಎಂದರೇನು? ವಿವಿಧ ಸಂವಹನ ಮಾಧ್ಯಮಗಳನ್ನು ಕುರಿತು ಬರೆಯಿರಿ.

೨) ನಾಟಕೀಯ ನಿರೂಪಣೆ ಎಂದರೇನು? ಉದಾಹರಣೆಯೊಂದಿಗೆ ವಿವರಿಸಿ.

೩) ಗೋಡೆಬರಹಗಳು ಸಾರ್ವಜನಿಕ ಸಂವಹನದ ಮಾಧ್ಯಮವಾಗಿ ಹೇಗೆ ಬಳಕೆಯಾಗುತ್ತದೆ?

(ಪು.ತಿ.ನೋ.)

ಕಾ / ೨

೪) ಜಾಹಿರಾತುಗಳು ಪ್ರಕಟಗೊಳ್ಳುವ ಬಗೆಗಳು ಮತ್ತು ಅವುಗಳ ಕಾರ್ಯ ಸ್ವರೂಪವನ್ನು ಕುರಿತು ಬರೆಯಿರಿ.

**ಆ. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ** ೨೦

೧. ಭಾಷೆ ಮತ್ತು ಸಂವಹನ  ೨. ಆಡುನುಡಿ
೩. ವಿವರಣೆ  ೪. ಕಥನಾತ್ಮಕ ನಿರೂಪಣೆ
೫. ಕರಪತ್ರಗಳು  ೬. ಭಿತ್ತಿಪತ್ರಗಳು

***

Created by demo-version of Universal Document Converter. Full version doesn't add this stamp. WWW.PRINT-DRIVER.COM